ಇ) ೩೧. ೩. ೧೯೮೮ರವರೆಗೆ ಕಳೆದ ಮೂರು ವರ್ಷಗಳ ಸವಿಸ್ತೆಯಿಂದ ಕಡಿಮೆ ವೋಲ್ಟೇಜಿನಿಂದ ಪಂಪುಸೆಟ್ಟುಗಳು ಸುಟ್ಟು ಹೋದ ಪ್ರಸಂಗಗಳು ಮಂಡಳಿಯ ಗಮನಕ್ಕೆ ಬಂದಿಲ್ಲ, ವೋಲ್ಟಾರುಗಳು ವಿವಿಧ ಕಾರಣಗಳಿಗಾಗಿ ಸುಡುತ್ತವೆ. ಮಂಡಲಿ ಪರಿಹಾರ ಕೊಡುವ ಪ್ರಶ್ನೆ ಇಲ್ಲ.

ಜಲವಿದ್ಯುತ್ ಯೋಜನೆಗೆ ಹೈಡ್ರಾಲಿಕ್ ಎಲಿವೇಟರ್ ಖರೀದಿಸಿದ ಬಗ್ಗೆ

೩೧೯ (೩೨೩) ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ವಿದ್ಯುತ್ ನಿಗಮವು ತನ್ನ ಯಾವ ಜಲವಿದ್ಯುತ್ ಯೋಜನೆಗಾಗಿ ಪೋಕ್‌ಲೇನ್ ಹೈಡ್ರಾಲಿಕ್ ಎಲವೇಟರನ್ನು ಫ್ರಾನ್ಸ್ ದೇಶದಿಂದ ಖರೀದಿಸಿದೆ ?

ಆ) ಇದಕ್ಕಾಗಿ ನಿಗಮದವರು ವೆಚ್ಚ ಮಾಡಿದ ಹಣವೆಷ್ಟು ?

ಇ) ಪ್ರಸ್ತುತ ಈ ಪೋಕ್ಲೈನ್ ಯಂತ್ರ ನಿಗಮದ ಮಾಲಿಕತ್ವದಲ್ಲಿದೆಯೇ ? ಅಥವಾ ಗುತ್ತಿಗೆದಾರರಿಗೆ ಮಾರಾಟ ಮಾಡಲಾಗಿದೆಯೇ ?

ಈ) ಈ ಯಂತ್ರದ ಖರೀದಿ ವಿಚಾರದಲ್ಲಿ ನಡೆದಿರುವ ಆವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಪೋಕ್ಲೈನ್ ಹೈಡ್ರಾಲಿಕ್ ಎಕ್ಸ್‌ಕವೇಟರ್‌ಗಳನ್ನು ಚಕ್ರಾ ಯೋಜನೆಯ ಕೆಲಸಗಳಿಗಾಗಿ ಖರೀದಿಸಲಾಗಿತ್ತು.

ಆ) ೭ ಎಲ್ ಸಿ-೮೦ ಪೋಕ್ಲೈನ್‌ಗಳನ್ನು ಪ್ರತಿಯಂತ್ರಕ್ಕೆ ರೂ. ೧೨.೫ ಲಕ್ಷ ರೂ. ಗಳ ದರದಲ್ಲಿ ಮತ್ತು ೩ ಸಿಕೆ-೩೦೦ ಪೋಕ್ಲೈನ್‌ಗಳನ್ನು ಪ್ರತಿ ಒಂದಕ್ಕೆ ೩೫ ಲಕ್ಷ ರೂ. ಗಳ ದರದಲ್ಲಿ ಕೊಳ್ಳಲು ಒಟ್ಟು ೧.೯೨ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

ಇ) ಎಲ್ಲ ಯಂತ್ರಗಳೂ ಕರ್ನಾಟಕ ವಿದ್ಯುತ್ ನಿಗಮದ ಅಧೀನದಲ್ಲಿದೆ. ಚಕ್ರಾ ಹಾಗೂ ವರಾಹಿ ಯೋಜನೆಯ ಕೆಲಸದ ಸಂಯೋದಲ್ಲಿ ದೀರ್ಘಾವಧಿ ಕಾಲದ ಬಾಡಿಗೆಯ ಮೇಲೆ ಗುತ್ತಿಗೆದಾರರಿಗೆ ನಿಗಮದ ನಿಯಮಾವಳಿಗಳ ಪ್ರಕಾರ ಕೊಡಲಾಗಿತ್ತು. ಚಕ್ರಾ ಯೋಜನೆಯ ಕೆಲಸವು ಮುಗಿದ ನಂತರ ಎರಡು ಯಂತ್ರಗಳನ್ನು ಕಲ್ಲಿದ್ದಲು ಕೆಲಸಕ್ಕೋಸ್ಕರ ರಾಯಚೂರು ಶಾಖೋತ್ಪನ್ನ ಕೇಂದ್ರಕ್ಕೆ ಹಾಗೂ ೨ ಯಂತ್ರಗಳನ್ನು ಕಾಳಿ ಜಲವಿದ್ಯುತ್ ಯೋಜನೆಯ ಕೆಲಸಗಳಿಗೂ ವರ್ಗಾಯಿಸಲಾಯಿತು. ಎಲ್ಲ ಯಂತ್ರಗಳು ಸಮರ್ಪಕ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುವ ಸ್ಥಿತಿಯಲ್ಲಿವೆ.

ಈ) ಇಲ್ಲ.

ದೊಡ್ಡ ಕಲ್ಲು ಗಣಿಗಳಿಂದ ಬರುವ ವಾರ್ಷಿಕ ಆದಾಯ

೩೨೦ (೩೫೮) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ದೊಡ್ಡ ಕಲ್ಲು ಗಣಿ ಗುತ್ತಿಗೆಯನ್ನು ಹಿಡಿದ ಗುತ್ತಿಗೆ ಕಂಪನಿಗಳು ಎಷ್ಟು ? ಅವುಗಳ ಹೆಸರುಗಳೇನು ? (ವಿವರ ಒದಗಿಸುವುದು)

ಆ) ವಿವಿಧ ಕಂಪನಿಗಳಿಂದ ಬಂದ ರಾಜಧನದ ಮೊತ್ತ ಎಷ್ಟು ? (೧೯೮೫-೮೬, ೮೬-೮೭, ೧೯೮೭-೮೮ರ ವರೆಗೆ) ವಿವರಿಸುವುದು,

ಇ) ಗುಡ್ಡಗಳ ವಿಪರೀತ ಕಲ್ಲು ಸಾಗಾಣಿಕೆಯಿಂದ ಪರಿಸರ ಅಸಮತೋಲನೆಯು ಕಾಣಿಸಿಕೊಂಡು ನಿಸರ್ಗ ನಾಶವಾಗುವುದಿಲ್ಲವೆ ?